ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1117 (1345)**
ಉತ್ತರಿಸಬೇಕಾದ ಸಚಿವರು	:	**ಕೃಷಿ ಸಚಿವರು**
ಉತ್ತರಿಸಬೇಕಾದ ದಿನಾಂಕ	:	**24-12-2021**

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕದಲ್ಲಿ ಕೃಷಿ ಹಾಗೂ ತತ್ಸಂಭಿತವಾದ ಯಾವ -ಯಾವ ಕಾಲೇಜುಗಳಿವೆ; (ವಿದ್ಯಾರ್ಥಿಗಳ ಅಂಕಿ-ಅಂಶ ಕೋರ್ಸುವಾರು ವಿವರ ಒದಗಿಸುವುದು)</td><td>ರಾಜ್ಯದಲ್ಲಿ ಈ ಕೆಳಕಂಡಂತೆ ಒಟ್ಟು 4 ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿವೆ; ಆಯಾ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಕಾಲೇಜುಗಳ ವಿವರ ಹಾಗೂ ವಿದ್ಯಾರ್ಥಿಗಳ
2020-21ನೇ ಸಾಲಿನ ಅಂಕಿ-ಅಂಶ ಕೋರ್ಸ್ ವಾರು ವಿವರವನ್ನು ಅನುಬಂಧ 1 ರಿಂದ 4 ರಲ್ಲಿ ಒದಗಿಸಿದೆ.
1. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
2. ಕೃಷಿ ವಿಶ್ವವಿದ್ಯಾಲಯ, ಧಾರವಾಡ.
3. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
4. ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.</td></tr>
<tr><td>ಆ)</td><td>ಸದರಿ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಸಂದರ್ಭದಲ್ಲಿ ಪಡೆಯುವ ಅಂಕಪಟ್ಟಿಗಳು ಹಾಗೂ ಪದವಿ ಪತ್ರಗಳು ನಕಲಿಯಾಗದಂತೆ ಯಾವ ಸುರಕ್ಷತೆ ವ್ಯವಸ್ಥೆ ಹೊಂದಿದೆ;</td><td>ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಸಂದರ್ಭದಲ್ಲಿ ಪಡೆಯುವ ಅಂಕಪಟ್ಟಿಗಳು ಹಾಗೂ ಪದವಿ ಪತ್ರಗಳು ನಕಲಿಯಾಗದಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳು ಈ ಕೆಳಕಂಡಂತೆ ಸುರಕ್ಷತಾ ವ್ಯವಸ್ಥೆಯನ್ನು ಹೊಂದಿವೆ;
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು ಈ ಕೆಳಕಂಡಂತೆ ಸುರಕ್ಷಿತ ಅಂಶಗಳನ್ನು ಅಳವಡಿಸಿಕೊಂಡಿರುತ್ತಾರೆ;
<table><tr><th>Sl.No.</th><th>Security Feature</th></tr><tr><td>1.</td><td>High Resolution Border</td></tr><tr><td>2.</td><td>Static Micro text</td></tr><tr><td>3.</td><td>Relief Background</td></tr><tr><td>4.</td><td>Guilloche Design</td></tr><tr><td>5.</td><td>Watermark</td></tr></table></td></tr>
</table>

6.	International Spelling Mistake
7.	One Net Fill
8.	Copy Void
9.	Ghost Image
10.	Mirror Text
11.	Invisible Sign & Logo
12.	Flourescent Ink
13.	Gold Foil
14.	Encrypted QR code
15.	Personalized Micro text
16.	Serial Numbering - Step Numbering like new currency notes

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಗುರುತಿನ ಸಂಖ್ಯೆಯನ್ನು ನೀಡಲಾಗುತ್ತದೆ. ಆಯಾ ಗುರುತಿನ ಸಂಖ್ಯೆಗಳನ್ನು ಪ್ರತಿ ವಿದ್ಯಾರ್ಥಿಯ ಅಂಕಪಟ್ಟಿ ಹಾಗೂ ಪದವಿ ಪ್ರಮಾನ ಪತ್ರದಲ್ಲಿ ನಮೂದಿಸಲಾಗುತ್ತದೆ. ಅಲ್ಲದೆ, ಪದವಿ ಪಡೆದ ವಿದ್ಯಾರ್ಥಿಗಳು ವಿವಿಧ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಹಾಗೂ ಉದ್ಯೋಗವನ್ನು ಪಡೆಯುವ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಗಳ / ಉದ್ಯೋಗದಾತರ ಮನವಿಯ ಮೇರೆಗೆ ಅಂಕಪಟ್ಟಿಗಳನ್ನು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ವಿಶ್ವವಿದ್ಯಾಲಯದಲ್ಲಿ ಭೌತಿಕವಾಗಿ ಪರಿಶೀಲಿಸಿ ದೃಢೀಕರಿಸಲಾಗುತ್ತಿದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರುನಲ್ಲಿ ಈ ಕೆಳಕಂಡ ಸುರಕ್ಷಿತ ಅಂಶಗಳನ್ನು ಒಳಗೊಂಡ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿದೆ;

1. ಹೆಚ್ಚಿನ ರೆಸಲ್ಯೂಶನ್ ಗಡಿ (High resolution border)
2. ಗೋಚರಿಸುವ ವಿಶ್ವವಿದ್ಯಾಲಯದ ಲಾಂಚನ
3. ಸರಣಿ ಕ್ರಮ ಸಂಖ್ಯೆ
4. ಗೋಚರಿಸದ ವಿಶ್ವವಿದ್ಯಾಲಯದ ಲಾಂಚನ
5. ಕ್ಯೂಆರ್ ಕೋಡ್
6. ಸ್ಥಿರ ಸೂಕ್ಷ್ಮ ಪಠ್ಯ
7. ವಾಟರ್ ಮಾರ್ಕ್

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇವರು ಅಂಕಪಟ್ಟಿಗಳು ಹಾಗೂ ಪದವಿ ಪತ್ರಗಳ ಮುದ್ರಣದ ಸಂಪೂರ್ಣ ಪ್ರಕ್ರಿಯೆಯನ್ನು ಹೊರಗಿನ ಸಂಸ್ಥೆಗಳಿಗೆ ಗುತ್ತಿಗೆಯನ್ನು ನೀಡಿರುವುದಿಲ್ಲ. ಪರಂತು, ಅಂಕಪಟ್ಟಿಗಳು ಹಾಗೂ ಪದವಿ ಪತ್ರಗಳ ಮುದ್ರಣದ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವಂತಹ ಖಾಯಂ ಬೋಧಕ ಮತ್ತು ಬೋಧಕೇತರ